(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:141/2015-16 ದಿನಾಂಕ:02.08.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ.**

* * * * *

**ವಾದಿಗಳು: ಶ್ರೀ/ ಶ್ರೀಮತಿ**

1] ಲಕ್ಷ್ಮೀದೇವಿ ಗಂಡ ಲೇಟ್ ಹನುಮಂತಪ್ಪ,
ವಾಸ: ಆನೆಗುಂದಿ ಗ್ರಾಮ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ.

**[ಶ್ರೀ ಎ.ವಿರುಪಾಕ್ಷ ರೆಡ್ಡಿ, ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ,
2] ಆನೆಗುಂದಿ ಹನುಮಂತಪ್ಪ ತಂದೆ ನಾರಯ್ಯ,
ವಾಸ: 30 ನೇ ವಾರ್ಡ್, ಹಳೆ ಅಮರಾವತಿ, ಹೊಸಪೇಟೆ, ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಕೆ.ಸಿ.ಶರಣಪ್ಪ, ವಕೀಲರು, ಹೊಸಪೇಟೆ.]**

**ವ್ಯಾಜ್ಯದ ಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಗರಿಬೊಮ್ಮನಹಳ್ಳಿ | ಚಿಂತ್ರಪಳ್ಳಿ | 422/12ಆ | 02 ಎಕರೆ 55 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಗರಿಬೊಮ್ಮನಹಳ್ಳಿ ಹೋಬಳಿ ಚಿಂತ್ರಪಳ್ಳಿ ಗ್ರಾಮದ ಸ.ನಂ.422/12ಆ ವಿಸ್ತೀರ್ಣ:02 ಎಕರೆ 55 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/01/2015-16 ದಿನಾಂಕ:13.08.2015 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:16.01.2016 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:24.03.2016 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನು ವಾದಿಯ ಹಿರಿಯ ಸಹೋದರಿಯಾದ ಶ್ರೀಮತಿ ಕಡ್ಲೆಮ್ಮ ತಂದೆ ದಿ॥ ಹನುಮಂತಪ್ಪ ಇವರಿಗೆ ಸಂಬಂಧಿಸಿದ್ದು, ಸದರಿ ದಿ॥ ಹನುಮಂತಪ್ಪ ಇವರಿಗೆ ದಿ॥ ಕಡ್ಲೆಮ್ಮ, ವಾದಿಯಾದ ಲಕ್ಷ್ಮೀದೇವಿ ಹಾಗೂ ಕಡ್ಲೆಪ್ಪ ಎಂಬ ಮೂವರು ಮಕ್ಕಳಿದ್ದು, ದಿ॥ ಕಡ್ಲೆಮ್ಮ ಹಾಗೂ ವಾದಿಯಾದ ಲಕ್ಷ್ಮೀದೇವಿ ಇವರುಗಳು ದೇವದಾಸಿಯರಾಗಿ ತಮ್ಮ ಪೋಷಕರನ್ನು ತೊರೆದಿರುವುದಾಗಿ, ತದನಂತರದಲ್ಲಿ ದಿನಾಂಕ:24.11.2000 ರಂದು ಕಡ್ಲೆಪ್ಪ ಇವರು ಮರಣ ಹೊಂದಿರುವುದಾಗಿ, ಇವರ ಮರಣಾನಂತರ ಕಡ್ಲೆಮ್ಮ ತಂದೆ ದಿ॥ ಹನುಮಂತಪ್ಪ ಇವರು ಪೋತಿ ವಾರಸು ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಸದರಿ ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯು ಕಡ್ಲೆಮ್ಮ ತಂದೆ ದಿ॥ ಹನುಮಂತಪ್ಪ ಇವರ ಹೆಸರಿನಲ್ಲಿ ನಮೂದು ಇರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಮುಂದುವರೆದು ಕಡ್ಲೆಮ್ಮ ತಂದೆ ದಿ॥ ಹನುಮಂತಪ್ಪ ಇವರು ದಿನಾಂಕ:16.10.2014 ರಂದು ಮರಣ ಹೊಂದಿರುವುದಾಗಿ, ಇವರಿಗೆ ಸಂತಾನವಿರುವುದಿಲ್ಲವೆಂದು ಹಾಗೂ ಇವರು ತಮ್ಮ ವಾರಸುದಾರರನ್ನಾಗಿ ವಾದಿಯನ್ನು ಬಿಟ್ಟುಹೋಗಿರುವುದಾಗಿ ತಿಳಿಸಿರುತ್ತಾರೆ. ಇವರ ಮರಣಾನಂತರ ವಾದಿಯು ಪೋತಿ ವಾರಸು ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಲಾಗಿ ಪ್ರತಿವಾದಿ-2 ರವರು ತಕರಾರು ಸಲ್ಲಿಸಿದ್ದು, ಪ್ರತಿವಾದಿ-1 ರವರು ಸದರಿ ವಹಿವಾಟನ್ನು

ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆ ನಡೆಸಿರುವುದಾಗಿ, ಪ್ರತಿವಾದಿ-1 ರವರು ಪ್ರಕರಣದಲ್ಲಿಯ ದಾಖಲೆಗಳನ್ನು ಪರಿಶೀಲಿಸದೇ, ಉಭಯ ಪಕ್ಷಗಾರರನ್ನು ಸರಿಯಾಗಿ ವಿಚಾರಣೆ ನಡೆಸದೇ ಹಾಗೂ ವಾದಿಗೆ ಯಾವುದೇ ಅವಕಾಶ ನೀಡದೇ ಸದರಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿದ್ದು, ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳವಂತೆ ತಿಳಿಸಿ ಮಾಡಿರುವ ಆದೇಶವು ಖಂಡನೀಯವಾದುದೆಂದು, ವಾದಿಯು ಕಡ್ಲೆಮ್ಮ ಇವರ ವಾರಸುದಾರರೆಂದು, ವಾದಿಗೆ ಮಾತ್ರ ಸದರಿ ಜಮೀನಿನ ಮೇಲೆ ಹಕ್ಕು ಇರುವುದೆಂದು ವಾದಿಪರ ವಕೀಲರು ತಿಳಿಸಿರುತ್ತಾರೆ.

ಮುಂದುವರೆದು, ಪ್ರತಿವಾದಿ-1 ರವರು ಮಾಡಿರುವ ಆದೇಶವು ಕಾನೂನು ಬಾಹಿರವಾದುದೆಂದು, ಸದರಿ ಆದೇಶದಿಂದ ಬಾದಿತಗೊಂಡ ವಾದಿಯು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ, ತಮ್ಮ ಅಪೀಲನ್ನು ಅಂಗೀಕರಿಸಿ, ಸದರಿ ಪ್ರಶ್ನಿತ ಆದೇಶವನ್ನು ತಳ್ಳಿಹಾಕುವಂತೆ ಕೋರಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಆದರೆ, ವಾದಿಗಳು ಮತ್ತು ಪ್ರತಿವಾದಿಗಳು ದಿನಾಂಕ:09.06.2016 ರಂದು ವಿಚಾರಣೆ ಸಂದರ್ಭದಲ್ಲಿ ತಮ್ಮ ವಕೀಲರುಗಳ ಮುಖಾಂತರ ಹಾಜರಾಗಿ, ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ಪ್ರತಿವಾದಿ-2 ರವರು ವಾದಿಯ ಹೆಸರಿಗೆ ಸದರಿ ವ್ಯಾಜ್ಯದ ಜಮೀನನ್ನು ಬಿಟ್ಟುಕೊಡಲು ಒಪ್ಪಿಗೆ ನೀಡಿರುತ್ತಾರೆ. ಪ್ರತಿವಾದಿ-2 ರವರು ಸದರಿ ವ್ಯಾಜ್ಯದ ಜಮೀನನ್ನು ತಮ್ಮ ತಾಯಿಯಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ನೀಡಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಪ್ರಶ್ನಿತ ಆದೇಶವನ್ನು ರದ್ದುಪಡಿಸುತ್ತಾ, ಪ್ರತಿವಾದಿ-2 ರವರು ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ತಮ್ಮ ತಾಯಿಯಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ನೀಡಿರುವ ಮೇರೆಗೆ, ವಾದಿಯ ಹೆಸರಿನಲ್ಲಿ ಸದರಿ ವ್ಯಾಜ್ಯದ ಜಮೀನನ್ನು ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಗರಿಬೊಮ್ಮನಹಳ್ಳಿ ತಾಲೂಕು ಹಗರಿಬೊಮ್ಮನಹಳ್ಳಿ ಹೋಬಳಿ ಚಿಂತ್ರಪಳ್ಳಿ ಗ್ರಾಮದ ಸ.ನಂ.422/12ಅ ವಿಸ್ತೀರ್ಣ:02 ಎಕರೆ 55 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/01/2015-16 ದಿನಾಂಕ:13.08.2015 ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕುತ್ತಾ, , ಪ್ರತಿವಾದಿ-2 ರವರು ದಿನಾಂಕ:09.06.2016 ರಂದು ತೆರೆದ ನ್ಯಾಯಾಲಯದಲ್ಲಿ ತಮ್ಮ ತಾಯಿಯಾದ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ನೀಡಿರುವ ಮೇರೆಗೆ, ವಾದಿಯ ಹೆಸರಿನಲ್ಲಿ ಸದರಿ ವ್ಯಾಜ್ಯದ ಜಮೀನನ್ನು ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:02.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

Sub Divisional Magistrate, Hospet

**[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]**
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು**:- ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.